# ಭುಗಿಲೆದ್ದ ಅರೆಮಾನವರ ಅತೃಪ್ತಿ

‘ಅದು ಸಹಜವೇ. ಸಂಚಾರ ವಿಭಾಗದ ವಿಪರೀತ ಉದಾಸೀನದಿಂದಾಗಿ, ಅವೈಜ್ಞಾನಿಕ ರಸ್ತೆಗಳಿಂದಾಗಿ ಹಾಗೂ ಹೆಚ್ಚಾದ ಜನದಟ್ಟಣೆಯಿಂದ ಅಪಘಾತಗಳಲ್ಲಿ ಏರಿಕೆ ಕಂಡುಬಂದಿದ್ದು, ಅಪಘಾತಗಳಲ್ಲಿ ತಮ್ಮ ದೇಹಕ್ಕೆ ಆದ, ಊನಗಳನ್ನು ಸರಿಪಡಿಸಲು ಮಾಡಿಕೊಂಡ ಕೃತಕ ವ್ಯವಸ್ಥೆ ಇದು. ಬದುಕಿದೆಯಾ ಬಡ ಜೀವವೇ ಎಂದೆನ್ನುಕೊಳ್ಳುವಾಗಲೇ ಅವರು ಆಪರೇಷನ್ ಆದ ಮರುದಿನ ಈ ಅರೆ ಮಾನವ ಪಡೆಗೆ ಸೇರ್ಪಡೆಯಾಗುತ್ತಾರೆ’, ವೇದಾಂತಿಯಂತೆ ನುಡಿದ ಅವಿರತ್.

‘ನಿಜಕ್ಕೂ ಇದೊಂದು ದುರಂತ ಕಥೆ’, ತಂಪು ಪಾನೀಯದ ಸಿಪ್ ಹೀರುತ್ತಾ ಲೊಚಗುಟ್ಟಿದಳು ಹನ್ನಾ.

‘ಸಂಚಾರ ವಿಭಾಗದ ಸಂಪೂರ್ಣ ವ್ಯವಸ್ಥೆಯನ್ನು ಅಲ್ಲಾಡಿಸಿದ ಈ ಬೆಳವಣಿಗೆಗಳು ರೋಬೋ ಕಾಪ್‌ಗಳಿಗೆ ಬೇಡಿಕೆ ತಂದಿವೆ. ತನಿಖೆ ಹೊರಗುತ್ತಿಗೆಗೆ ನೀಡಲಾಯಿತು. ಕೇವಲ ಅಂದಂದೇ ಪರಿಶೀಲನೆ ಹಾಗೂ ತೀರ್ಪು ನೀಡುವುದು ಸರ್ಕಾರದ ವತಿಯಿಂದ ನಡೆಯುತ್ತಿದೆಯಷ್ಟೇ. ಇದರಿಂದ ಸಾಕ್ಷಿಗಳು ನ್ಯಾಯಾಲಯಕ್ಕೆ ನೇರವಾಗಿ ಬಂದು ಸಾಕ್ಷಿ ಒದಗಿಸುವ ಪ್ರಮೇಯ ತಪ್ಪುತ್ತಿದೆ. ವ್ಯತಿರಿಕ್ತ ಸಾಕ್ಷಿ ನೀಡುವುದು, ಸಾಕ್ಷಿಗಳ ಹೇಳಿಕೆ ತಿರುಚುವುದು, ಸ್ಥಳದಲ್ಲಿ ಸರಿಯಾದ ತನಿಖೆ ಕೈಗೊಳ್ಳದಿರುವುದು ಸೇರಿದಂತೆ ತನಿಖಾಲೋಪಗಳನ್ನೆಲ್ಲ ಸರಿಪಡಿಸಿದಂತಾಗಿದೆ. ಎಲ್ಲದಕ್ಕಿಂತ ಹೆಚ್ಚಾಗಿ ಸ್ಥಳ ವಸೂಲಿ ತಪ್ಪಿಹೋಗಿದೆ.’

